



## ಹೈಡೆಫಿನಿಷನ್ ಮೇಕಪ್

‘ಸಾಮಾನ್ಯವಾಗಿ ಎಲ್ಲ ಮದುವೆಗಳಲ್ಲಿ ವಧು ಹೈಡೆಫಿನಿಷನ್ (ಎಚ್‌ಡಿ) ಮೇಕಪ್ ಅನ್ನೇ ಮಾಡಿಸಿಕೊಂಡಿರುತ್ತಾಳೆ. ಮೊದಲೆಲ್ಲ ಹಾಲಿವುಡ್, ಬಾಲಿವುಡ್ ತಾರೆಯರು ಈ ಮೇಕಪ್ ಅನ್ನು ಮಾಡಿಸಿಕೊಳ್ಳುತ್ತಿದ್ದರು. ಇದೀಗ ಮದುವೆ ಮನೆಗೆ ಎಚ್‌ಡಿ ಮೇಕಪ್ ಕಾಲಿಟ್ಟಿದೆ. ಜರ್ಮನಿಯಿಂದ ಬಂದ ಈ ಮೇಕಪ್ ತಂತ್ರಜ್ಞಾನ ಬಹುಬೇಗ ಜನಪ್ರಿಯವೂ ಆಗಿದೆ.

ಈ ಮೇಕಪ್‌ನ ವಿಶೇಷತೆಯೆಂದರೆ ಇದು ವಾಟರ್‌ಪ್ರೂಫ್ ಆಗಿದ್ದು, ಮಳೆ ಬರಲಿ, ಬೆವರಿನಿಂದ ತೋಯ್ದುಹೋಗಲಿ, ಅಥವಾ ಹೋಮದ ಮುಂದೆ ಕುಳಿತಾಗ ಹೊಗೆ ತಾಗಿದರೂ ಮೇಕಪ್ ಅಲ್ಲಾಡುವುದಿಲ್ಲ. ಮಾಸುವುದಿಲ್ಲ, ಅಂದಗೆಡುವುದಿಲ್ಲ. ಸುಮಾರು 12 ತಾಸುಗಳವರೆಗೆ ಮೇಕಪ್ ತಾಜಾತನ ಕಾಪಾಡಿಕೊಂಡು ಬರುತ್ತದೆ’ ಎಂದು ವಿವರ ನೀಡುತ್ತಾರೆ ಬೆಂಗಳೂರಿನ ಸೌಂದರ್ಯ ಹಾಗೂ ಕೇಶತಜ್ಞೆ ಉಮಾ ಜಯಕುಮಾರ್.

‘ಸಿರಿವಂತರಿಗಾಗಿಯೇ ಏರ್‌ಬ್ರಷ್ ಮೇಕಪ್ ಹೊಸದಾಗಿ ಬಂದಿದೆ. ಇದು ಎಸಿ ಹಾಲ್‌ನಲ್ಲಿದ್ದಾಗ ಬಳಸುವಂಥದ್ದು. ಇದು ಬಹಳ ದುಬಾರಿಯಾಗಿದ್ದು, ಹಣವನ್ನು ಧಾರಾಳವಾಗಿ ಖರ್ಚು ಮಾಡುವವರು ಮಾತ್ರ ಮಾಡಿಸಿಕೊಳ್ಳುತ್ತಾರೆ’ ಎನ್ನುತ್ತಾರೆ ‘ವನ್‌ಮಿನಿಟ್ ಹೇರ್ ಸ್ಟೈಲ್’ ಖ್ಯಾತಿಯ ಉಮಾ ಜಯಕುಮಾರ್.

ಕಣ್ಣುಗಳಿಗೆ ಮಾಡುವ ಐ ಮೇಕಪ್, ಹುಬ್ಬು, ರೆಪ್ಪೆಗಳಿಗೆ ಶೈನಿಂಗ್ ಬರಲು ಶಿಮ್ಮರ್ ಬಳಸಲಾಗುತ್ತದೆ. ಐ ಲ್ಯಾಶಸ್ ಕೂಡ ಕೃತಕವಾಗಿ ತಯಾರಿಸಿದ್ದು ಬಂದಿದೆ. ಇದು ಎಲಿಗೆಂಟ್ ಲುಕ್ ಕೊಡುತ್ತದೆ. ಜೆಲ್ ಐಲೈನರ್ ಲೇಪಿಸಿಕೊಂಡರೆ ಅದು ಸ್ಪ್ರೆಡ್ ಆಗುವ ಆತಂಕವಿಲ್ಲ. ಇನ್ನು ತುಟಿಗಳಿಗೆ ಕೆಂಪು, ಕಿತ್ತಳೆ ಬಣ್ಣದ ಲಿಪ್‌ಸ್ಟಿಕ್ ಹಚ್ಚಿಕೊಳ್ಳುವುದು ಈಗಿನ ಟ್ರೆಂಡ್.

ಎಲ್ಲ ಮೇಕಪ್ ಮಾಡುವ ಮುನ್ನ ಉತ್ತಮ ಗುಣಮಟ್ಟದ ಪ್ರೈಮರ್ ಹಾಕಿಕೊಂಡರೆ ಅಲರ್ಜಿ ಆಗುವ ಭಯವಿರುವುದಿಲ್ಲ.

## ಮೇಕಪ್, ಉಡುಪಿಗೆ ತಕ್ಕ ಕೇಶಶೈಲಿ

ಮದುವೆಗಳಲ್ಲಿ ಈಗೀಗ ಎಲ್ಲರೂ ಮೆಸ್ಸಿ ಜಡೆ ಹಾಗೂ ಮೆಸ್ಸಿ ನಾಟ್ ಕೇಶಶೈಲಿಯ ಮೊರೆ ಹೋಗುತ್ತಿದ್ದಾರೆ. ಇದಕ್ಕೂ ಮುನ್ನ ಪ್ರಿಂಟಿಂಗ್ ಎಂಬ ಮೆಷಿನ್ ಮೂಲಕ ಕೇಶವನ್ನು ಬ್ಲೆಂಡ್ ಮಾಡಲಾಗುತ್ತದೆ. ಮಲ್ಲಿಗೆ, ಗುಲಾಬಿ ಹೂವುಗಳಿಗೆ ಕಲರ್ ಸ್ಪ್ರೇ ಮಾಡಿ ಮುಡಿಸುವುದು ಇತ್ತೀಚಿನ ಟ್ರೆಂಡ್ ಆಗಿದೆ.

ಆಭರಣ ಮತ್ತೂ ಆಕರ್ಷಕವಾಗಿ ಕಾಣುವ ಸಲುವಾಗಿ ಇದೀಗ ಫ್ಲವರ್ ಜ್ಯುವೆಲ್ಲರಿ ಬಂದಿದ್ದು, ಡಾಬು, ವಂಕಿ, ಬೈತಲೆಬೊಟ್ಟುಗಳಿಗಾಗಿ ಇದನ್ನೇ ಬಳಸುವುದು ಬಹಳ ಜನಪ್ರಿಯತೆ ಪಡೆದಿದೆ ಎನ್ನುತ್ತಾರೆ ಉಮಾ.

ಕತ್ತಿಗೆ ನಕಾಸ್ ಮತ್ತು ಮಾವಿನಕಾಯಿ ಸೆಟ್ ಹಾಗೂ ಡಾಬು ಅನ್ನು ರೇಷ್ಮೆ ಸೀರೆಗೆ ಮ್ಯಾಚಿಂಗ್ ಆಗುವ ರೀತಿಯಲ್ಲಿ ಬಟ್ಟೆಯಲ್ಲಿ ಹೊಲಿಸಿ ಧರಿಸಿಕೊಳ್ಳುವುದೂ ಈಗೀಗ ಚಾಲ್ತಿಯಲ್ಲಿದೆ.

ಮದುವೆಗೆ ಎರಡು ದಿನ ಮೊದಲು ‘ಸಂಗೀತ್ ದಿನ್’ ಎಂದು ಆಚರಿಸಿಕೊಳ್ಳುವುದು ಈಗೀಗ



## ವಧುವಿಗಾಗಿಯೇ ವಜ್ರದ ಸೆಟ್

ಸಿರಿವಂತರ ಚಿತ್ತ ಹರಿಯುವುದು ವಜ್ರದ ಒಡವೆಗಳ ಕಡೆಗೇ. ಇದೀಗ ವಜ್ರದ ಒಡವೆ ವರ್ತಕರು ವಧುವಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಿದ ವಜ್ರಾಭರಣಗಳನ್ನು ಆಕರ್ಷಕ ವಿನ್ಯಾಸಗಳಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಇವೆಲ್ಲವೂ ಇಂದಿನ ಟ್ರೆಂಡ್‌ಗೆ ತಕ್ಕಂತೆ ರೂಪಿತವಾದವು. ಇವುಗಳಲ್ಲಿ ಸ್ಪಾರ್ಕ್ಲಿಂಗ್ ಡೈಮಂಡ್, ಸ್ಟೇಟ್‌ಮೆಂಟ್ ಪೀಸ್ ಮುಂತಾದವು ಮದುಮಗಳ ಅಲಂಕಾರಕ್ಕಾಗಿಯೇ ಲಭ್ಯ.

ಕೆಲವೊಂದು ಆಭರಣ ವಿನ್ಯಾಸಕಾರರು ಮತ್ತು ಮಳಿಗೆಗಳು ಜೀವನದ ಪ್ರಮುಖ ಘಟ್ಟವಾದ ವಿವಾಹ ಮಹೋತ್ಸವದ ದಿನದಲ್ಲಿ ಬಳಸುವುದಕ್ಕಾಗಿಯೇ ವಧೂವರರಿಗಾಗಿ ಪರಂಪರೆಯ ಆಭರಣವನ್ನೂ ಮಾರುಕಟ್ಟೆಗೆ ತಂದಿದ್ದಾರೆ. ಇದೂ ಸಾಂಪ್ರದಾಯಿಕ ಆಭರಣಕ್ಕೆ ಆಧುನಿಕ ಸ್ಪರ್ಶ ನೀಡಿ ವಿನ್ಯಾಸಗೊಳಿಸಿದಂತಹ ಆಭರಣಗಳು.

ಮದುವೆ ದಿನಕ್ಕಾಗಿಯೇ ವಧು ತನಗೆ ಬೇಕಾದ, ಮನಸ್ಸಿಗೆ ಒಪ್ಪುವಂಥ ಒಡವೆಗಳನ್ನು ವಿನ್ಯಾಸ ಮಾಡಲು ಒಡವೆ ವರ್ತಕರಿಗೇ ಹೇಳಿ ಒಡವೆ ಮಾಡಿಸಿಕೊಳ್ಳುವುದೂ ಇತ್ತೀಚಿನ ಒಡವೆ ಲೋಕದ ಹೊಸ ವಿದ್ಯಮಾನ.